(ಇಂದು ದಿನಾಂಕ:05-02-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರ ಪರ ವಕೀಲರಿಂದ :-**

ಮುಂದುವರೆದ ಮುಖ್ಯ ವಿಚಾರಣೆ ಇರುವುದಿಲ್ಲ.

**ಪಾಟೀ ಸವಾಲುಃ ಎದುರುದಾರ ನಂ.3 ರವರ ಪರ ಶ್ರೀ ಎಸ್ ಎನ್ ಎಮ್ ವಕೀಲರಿಂದ.**

1. ನನ್ನ ಮಗಳು ಮೇಘನಾ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ನನ್ನ ಮಗಳು ಶಾಲೆಗೆ ಹೋಗುತ್ತಾಳೆ, ಆದರೆ ಒಂದು ದಿನ ಬಿಟ್ಟು ಒಂದು ದಿನ ಹೋಗುತ್ತಾಳೆ. ನನ್ನ ಮಗಳು ಎಲ್ಲ ಪರೀಕ್ಷೆಗಳನ್ನು ಬರೆಯುತ್ತಾಳೆ ಎಂದರೆ ಸರಿ.
2. ದಿಃ 01-06-2024 ರಂದು ನನ್ನ ಮಗಳು ಮೇಘನಾ ಕಲಮಂಗಿಯಿಂದ ಸಿಂಧನೂರಿಗೆ ಬರುತ್ತಿದ್ದಾಗ ರಸ್ತೆ ಅಪಘಾತವಾಗಿರುತ್ತದೆ. ಅಪಘಾತದ ದಿನ ನಾನು ದೂರನ್ನು ಕೊಟ್ಟಿರುವುದಿಲ್ಲ. ದೂರನ್ನು ನಾನು ಕೊಟ್ಟಿರುವುದಿಲ್ಲ, ಶರಣೇಗೌಡ ಇವರು ದೂರನ್ನು ನೀಡಿರುತ್ತಾರೆ. ಅಪಘಾತವಾದ ನಾಲ್ಕು ದಿನಗಳ ನಂತರ ದೂರುದಾರ, ಎದುರುದಾರ ನಂ. 1 ಮತ್ತು ಪೋಲೀಸರು ಶಾಮಿಲಾಗಿ ಪರಿಹಾರವನ್ನು ಪಡೆಯಲು ಮೋ.ಸೈ.ಸಂಖ್ಯೆ ಕೆಎ-36 ಎಚ್.ಸಿ-7917 ನೇದ್ದನ್ನು ಮತ್ತು ಎದುರುದಾರ ನಂ. 1 ಇವರನ್ನು ಆರೋಪಿಯನ್ನಾಗಿ ಸೇರಿಸಿದ್ದಾರೆ ಎಂದರೆ ಸರಿಯಲ್ಲ.
3. ದಿಃ 01-06-2024 ರಂದು ನಾವು ಆರ್ ಎಮ್ ಪಿ ಡಾಕ್ಟರ್ ಬಳಿ ಚಿಕಿತ್ಸೆ ಕೊಡಿಸಿ, ನಂತರ ಬಳ್ಳಾರಿಯ ದಾನಮ್ಮ ಆಸ್ಪತ್ರೆಯಲ್ಲಿ ತೋರಿಸಿರುತ್ತೇವೆ. ಬಳ್ಳಾರಿಯ ದಾನಮ್ಮ ಆಸ್ಪತ್ರೆಯ ವೈದ್ಯರು ಎಮ್ ಎಲ್ ಸಿ ನೀಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ನಮ್ಮ ಮಾವರಾದ ಶರಣೇಗೌಡರಿಗೆ ಮಾಹಿತಿ ಇರುತ್ತದೆ. ನನ್ನ ಮಗಳು ಸಂಪೂರ್ಣ ಗುಣಮುಖವಾದ ನಂತರ ದಿಃ 28-06-2024 ರಂದು ಆಸ್ಪತ್ರೆಯಿಂದ ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿ.
4. ನನ್ನ ಮಗಳು ಮೇಘನಾ ಇವರಿಗೆ ಮೋ.ಸೈ. ಯಿಂದ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಸದರಿ ಮೋ.ಸೈ. ಯಿಂದ ಅಪಘಾತವಾಗಿ ಆದ ಗಾಯಗಳು ಅಲ್ಲ ಎಂದರೆ ಸರಿಯಲ್ಲ.

ನನ್ನ ಮಗಳ ಹೆಸರಲ್ಲಿ ಆರೋಗ್ಯ ವಿಮೆ ಇರುವುದಿಲ್ಲ. ನನ್ನ ಮಗಳ ಚಿಕಿತ್ಸೆಗಾಗಿ ರೂ.5 ಲಕ್ಷ ಖರ್ಚಾಗಿದ್ದು, ಸದರಿ ಖರ್ಚಿಗೆ ಸಂಬಂಧಿಸಿದಂತೆ ನಾನು ಎಲ್ಲ ಬಿಲ್ಲುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ಪತ್ರೆಯ ಬಿಲ್ಲುಗಳನ್ನು ನಾನು ಸೃಷ್ಟಿಸಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಗಳಿಗೆ ಯಾವುದೇ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ನಿಪಿ-8 ನ್ನು ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

5. ಅಪಘಾತದ ದಿನ ನನ್ನ ಮಗಳು ಹೆಲ್ಮೆಟ್ ಹಾಕಿರಲಿಲ್ಲ ಎಂದರೆ ಸರಿ. ಅಪಘಾತದ ದಿನ ಮೋ.ಸೈ.ಗೆ ಜಖಂ ಆದ ಬಗ್ಗೆ ನನಗೆ ಗೊತ್ತಿಲ್ಲ. ಎದುರುದಾರ ನಂ.1 ಸಂಬಂಧದಲ್ಲಿ ನನಗೆ ದೂರದ ಅಣ್ಣ ಆಗಬೇಕು. ಅರ್ಜಿದಾರರಿಗೆ ಅನುಕೂಲವಾಗಲೇಂದು ಎದುರುದಾರ ನಂ.1 ಇವರು ತಾವೇ ಆರೋಪಿಯಾಗಿ ಮತ್ತು ಮೋ.ಸೈನ್ನು ಪೋಲೀಸರ ಜೊತೆ ಶಾಮಿಲಾಗಿ ದೋ.ಪ.ದಲ್ಲಿ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ.

6. ಎದುರುದಾರರ ನಂ.1 ಮತ್ತು 2 ರವರು ಮೋ.ವಾ. ಕಾಯ್ದೆ ಮತ್ತು ವಿಮಾ ಶರತ್ತುಗಳನ್ನು ಉಲ್ಲಂಘನೆ ಮಾಡಿದ ಕಾರಣ ಎದುರುದಾರ ನಂ.3 ಇವರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು